ಅಂದು ಮಧ್ಯಾಹ್ನ ಸೀತಕ್ಕ ಅಡಿಗೋಣಕ್ಕೆ ಹೋಗಿ ಅವಲಕ್ಕಿ ಕೊಟ್ಟು ಬಂದಾಗ ಮನೆಯ ಬಾಗಿಲಲ್ಲಿ ಒಂದು ಪತ್ರ ಬಿದ್ದಿತ್ತು. ಅದನ್ನು ಕೈಗೆ ಎತ್ತಿ ನೋಡಿದಾಗ ಈ ಬಾರಿಯ ಪತ್ರ ಭಾರಿ ವಜನು ಇದ್ದುದು ಅವಳಿಗೆ ಗೊತ್ತಾಯಿತು. ಅಡ್ಡಿ ಇಲ್ಲ ಇಷ್ಟು ದಿನ ಬರೆಯದಿದ್ದುದಕ್ಕೆ ಇಷ್ಟು ವಜ್ಜೆಯ ಪತ್ರ ಬಂದಿದೆ ಎಂದುಕೊಂಡಳು. ಅದನ್ನೆತ್ತಿ ಅಲ್ಲಿಯೇ ಗಳದ ಸಂದಿನಲ್ಲಿ ಸಿಕ್ಕಿ ಸಿಟ್ಟು. ಊಟಮಾಡಿ ನೆರೆಮನೆಯ ಪಾಂಡೂ ಹತ್ತರ ಓದಿಸಿಕೊಂಡರಾಯಿತೆಂದು ವಿಚಾರಿಸಿ ಅಡಿಗೆಯ ಸಾಲಿನಲ್ಲಿ ಬಂದಳು. ಬಸಲೆಯ ಗಂಜಿ– ಆಸೆ ಹಾಗೂ ಗಂಜಿ, ಬಟ್ಟಲಲ್ಲಿ ತುಂಬ ಸುರಿದುಕೊಂಡು ಅದನ್ನು ನೆರೆಮನೆಗೆ ಕೇಳುವ ಹಾಗೆ ಸುರಿಯುತ್ತಿದ್ದಳು. ಈಗ ಅವಳಿಗೆ ಮನಸ್ಸಿಗೆ ಸ್ವಲ್ಪ ಹಿತವೆನಿಸಿತು. ಅಂತೂ ಬಂತಲ್ಲ ಮಗಳ ಪತ್ರ ಓದುವುದೂ ತಿಳಿಯುವುದೂ ತಡವಾದರೇನು ಅಡ್ಡಿ? ಹಾಗೆ ಗಂಜಿ ಸುರಿಯುತ್ತಿರುವುದರೊಂದಿಗೆ ಪತ್ರ ಬಂದುದರಿಂದ ಅವಳಿಗೆ ತನ್ನ ಮಗಳ ನೆನಪಾಯಿತು. ಅದು ಹಿಂದಿನದು. ತಾನು ಅವಳು ಕೂಡಿ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದುದು. ಹಿಂದೆ, ಅದಕ್ಕೂ ಹಿಂದೆ ಅವಳ ಬಾಲ್ಯದ್ದು.

'ನಾನು ಹೋಗುವಲ್ಲೆಲ್ಲ ಸೆರಗು ಹಿಡಿದುಕೊಂಡೇ ಹಿಂಬಾಲಿಸುವ ಆ ಮಗು ಇಂದು ಬೆಳೆದು ದೊಡ್ಡವಳಾಗಿದ್ದಾಳೆ. ಒಂದು ಘಳಿಗೆಯೂ ಬಿಡದೆ ಇರುತ್ತಿದ್ದವಳು ಈಗ ಒಬ್ಬಳೇ ನನ್ನನ್ನು ಇಲ್ಲಿ ಬಿಟ್ಟು ದೂರ ಹೋದಳಲ್ಲ. ಇನ್ನು ಹೀಗೆ ನಾಳೆ ಇನ್ನೊಬ್ಬರ ಮನೆಗೆ ಹೋಗುವವಳು. ನಾಲ್ಕು ಅಕ್ಷರ ಕಲಿತು ನಾಲ್ಕು ಕಾಸು ಗಳಿಸುತ್ತಾಳೆ. ನಾನೂ ಏನಾದರೂ ಕೈ ಮೈ ನುಗ್ಗಿಸಿ ದುಡಿದು ಹೊಟ್ಟೆಗೆ ಬೇಕಾದಷ್ಟು ಗಳಿಸುತ್ತೇನೆ. ಬಡತನದ ಸಂಸಾರ ಸಾಗಿದೆ. ಊಟ ಉಡಿಗೆಗೇನೋ ಸಾಕು. ಆದರೆ ಈಗ ಸ್ವಲ್ಪ ಹಣದ ದಾರಿ ಹುಡುಕಬೇಕಾಗಿದೆ. ಮಗಳನ್ನು ಎಲ್ಲಿಯಾದರೂ ಈ ಬೇಸಿಗೆಯಲ್ಲಿ ಗೊತ್ತುಮಾಡಿ, ಈ ಬಾರಿ ತಪ್ಪಿದರೆ ಮುಂದಿನ ಬೇಸಿಗೆಯಲ್ಲಿ ಗಂಡನನ್ನು ಹುಡುಕಿಕೊಡ ಬೇಕು– ಗಂಡು ಹುಡುಕಬೇಕು ಹೌದು... ಆದರೆ ಅದು ತಿಳಿದಷ್ಟು ಸುಲಭವಲ್ಲ. ನಾಳೆ ಅವಳ ಬಾಳುವೆಯ ಸಂಗ್ತಿ ಅದು. ಅಯ್ಯೋ ಎಲ್ಲಿ ಹುಡುಕಲಿ? ಹುಡುಕಿದಹಾಗೆ ಆಗಿತ್ತು. ಆಗುತ್ತಿತ್ತು. ಆದರೆ ಹುಡುಕಿಟ್ಟಂಥ ಒಬ್ಬ ಮಾಳಪ್ಪ ಪೋರ ಹೋಗಿಬಿಟ್ಟನಲ್ಲ. ಇನ್ನು ಹೊರಗೆ ಗೊತ್ತುಮಾಡಬೇಕಾದದ್ದು. ಅದು ಎಷ್ಟು ಬಿಗಿ ಎಂಬುದು ಹೆತ್ತಕರುಳಿಗೇ ಗೊತ್ತಾಗಬೇಕು. ಅದೇನು ಅವಲಕ್ಕಿ ತೆಗೆದುಕೊಂಡು ಹೋಗಿ ಕೊಟ್ಟುಬಂದ ಹಾಗೆಯೆ? ಹುಡುಗನ ದಂಧೆ, ಛಾಳಿ, ಮನೆತನ ಎಲ್ಲ ನೋಡಬೇಕು. ನೋಡುವುದಕ್ಕೂ ಹುಡುಗ ಚಲೋ ಇರಬೇಕು. ನನ್ನ ಮಗಳಿಗೆ ಒಪ್ಪುವಂಥವನಾಗಿರಬೇಕು. ಅಷ್ಟೇ ಅಲ್ಲ ನನ್ನ ಮಗಳು ಮಾಸ್ತರಣಿ ಆಗಿರುವುದರಿಂದ ಅಂಗಡಿಯಲ್ಲಿ ಕುಳಿತುಕೊಳ್ಳುವ ಸೆಟ್ಟಿ ಪೋರನ ಕುತ್ತಿಗೆಗೆ ಕಟ್ಟುವ ಮನಸ್ಸು ನನಗಿಲ್ಲ. ಅವಳಿಗೂ ಇದ್ದ ಹಾಗೆ ಇಲ್ಲ. ಯಾವನಾದರೂ ಮಾಸ್ತರನನ್ನೋ, ಸರಕಾರಿ ನೌಕರನನ್ನೋ ಹುಡುಕಬೇಕು. ಒಂದೇ, ಎರಡೇ? ಮಾಳಪ್ಪ ಬೇಕಾದರೆ ಹುಡುಕಿ ಇಟ್ಟಹಾಗಿದ್ದ ನೋಡು. ಬೇಕಾದ ಹಾಗೆ ಒಪ್ಪುವಂತಹ ಆಳು, ಸರಕಾರಿ ನೌಕರಿ, ಒಳ್ಳೇ ಸ್ವಭಾವ, ಎಲ್ಲಾ ಇತ್ತು. ಆದರೆ... ಅಲ್ಲಿಗೆ ಅವಸರದ ಊಟ ಮುಗಿಸಿ ಎದ್ದಳು. ಕೈ ತೊಳೆದು ಬಂದಳು. ಯೋಚಿಸುವುದೆಲ್ಲ ಅಲ್ಲಿಗೇ ನಿಂತಿತು. ಒದ್ದೆ ಕೈಯನ್ನು ಸೆರಗಿಗೆ ಒರೆಸಿಕೊಳ್ಳುತ್ತ ಕೆಂಪು ಪದರನ್ನು ತಲೆಯ ಮೇಲೆ ಸರಿಪಡಿಸಿಕೊಂಡು ಹೊರಗೆ ಬಂದು ಗಳದ ಸಂದಿನಿಂದ ಆ ಪತ್ರವನ್ನು ತೆಗೆದುಕೊಂಡು ಸರಕ್ಕನೇ ಅಲ್ಲಿಂದ ನುಸುಳಿ ದಣಪೆದಾಟಿ ಪಾಂಡೂನ ಮನೆಯತ್ತ ನಡೆದಳು.

ಪಾಂಡೂನ ಅಣ್ಣ ಕಾಲೇಜಿನಲ್ಲಿ ಕಲಿಯುತ್ತಿದ್ದವನು ಅಲ್ಲಿಯೇ ಹೊರಗೆ ಕಪ್ಪು ಬಣ್ಣದ ದಪ್ಪ ಪುಸ್ತಕವನ್ನು ಹಿಡಿದುಕೊಂಡು ಓದುತ್ತ ಕುಳಿತಿದ್ದ. ಅವನನ್ನು ಕಂಡು ಇನ್ನೂ ಒಳ್ಳೆಯದಾಯಿತು. ಎಂದುಕೊಂಡು ಹಿಗ್ಗದಳು. ಅವನ ತೀರ ಸಮೀಪಕ್ಕೆ ಹೋಗಿ ಸೊಂಟದ ಸೆರಗಿನಲ್ಲಿ ಸಿಲುಕಿಸಿದ ಆ